ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ - 19

2ನೇ ವರ್ಷ 17ನೇ ಸಂಚಿಕೆ ಕೊಪ್ಪ 23-12-1984 ಭಾನುವಾರ ಬೆಲೆ 20 ಪೈಸೆ

ಶೃಂಗೇರಿ ಕ್ಷೇತ್ರದ ಬಿ. ಜೆ. ಪಿ. ನಿಲುವು

ಶೃಂಗೇರಿ ಕ್ಷೇತ್ರದ ಬಿ.ಜೆ.ಪಿ. ಮತದಾರರು ಕಾಂಗ್ರೆಸ್ ಮತ್ತು ಸಿ. ಪಿ. ಐ. ಎರಡನ್ನೂ ವಿರೋಧಿಸುತ್ತಿದ್ದು, ಮತದಾರರ ವೇದಿಕೆಯ ಅಭ್ಯರ್ಥಿಗೆ ಬಿ. ಜೆ. ಪಿ. ಯ ಬೆಂಬಲ ಸಿಕ್ಕಿದಲ್ಲಿ ಗೆಲ್ಲುವ ಸಂಭವವಿದೆ. ಶಿವಮೊಗ್ಗ ಕ್ಷೇತ್ರದಲ್ಲಿ ರೈತ ಸಂಘದ ಅಭ್ಯರ್ಥಿ ನಿವೃತ್ತರಾಗಿ ಬಿ. ಜೆ. ಪಿ.ಗೆ ಬೆಂಬಲಿಸಿದರೆ. ಚಿಕ್ಕಮಗಳೂರು ಕ್ಷೇತ್ರಾದ್ಯಂತ ರೈತ ಸಂಘದ ಅಭ್ಯರ್ಥಿಗೆ ಬೆಂಬಲ ಕೊಡುವುದಾಗಿ ಶೃಂಗೇರಿ ಕ್ಷೇತ್ರದ ಬಿ.ಜೆ.ಪಿ. ಕಾರ್ಯದರ್ಶಿ ಕೆ.ಬಿ. ಶಿವಸ್ವಾಮಿ ತಿಳಿಸಿ, "ಬಿ.ಜೆ.ಪಿ. ಕಾಂಗ್ರೆಸ್ ಪರವಾಗಿ ಪ್ರಚಾರ ಮಾಡಿತ್ತು ಎಂಬ 9.12.84 ರ 'ಮುಂಜಾವು' ವರದಿಯನ್ನು ನಿರಾಕರಿಸುವುದಾಗಿ ಹೇಳಿಕೆ ನೀಡಿದ್ದಾರೆ.

(ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಕ್ಷೇತ್ರದ ಕೆಲವೆಡೆ ಆರೆಸ್ಸೆಸ್ಸಿನವರು "ಜೇಗಾನೆ ಗೆದ್ದರೆ ಗುಂಡೂರಾವ್ ಬಲ ಹೆಚ್ಚುತ್ತೆ....' ಎಂದು ಪ್ರಚಾರ ಮಾಡಿದ್ದರೆಂಬ ನಮ್ಮ ವರದಿಗೆ ನಮ್ಮಲ್ಲಿ ಪುರಾವೆ ಇದೆ. 'ಬಿ.ಜೆ.ಪಿ.' ಎಂದು ಬರೆದಿಲ್ಲ. —ಸಂ.)

ಜನರ ಬವಣೆಯ ನಡುವೆ ಮುಗಿಯದ ಚುನಾವಣೆಗಳ ಸಾಲು :

ಮತದಾರರ ನಿರಾಸಕ್ತಿಯೇ ಪ್ರಧಾನ ಅಂಶ

ಈಗ ಯಾವ ಪತ್ರಿಕೆಯನ್ನು ನೋಡಿದರೂ ಚುನಾವಣೆಯ ಸುದ್ದಿಗಳೇ ತುಂಬಿರುತ್ತವೆ. ಜನತೆಗೆ ಚುನಾವಣೆಯಲ್ಲಿ ಆಸಕ್ತಿಯಿರಲಿ–ಬಿಡಲಿ, ಆಸಕ್ತಿಯಿದ್ದರೂ ಸುದ್ದಿ ಮಾಡಿ, ಆಸಕ್ತಿಯಿಲ್ಲದಿದ್ದರೂ ಹಾಗಂತಲೇ ಬರೆದು ಪತ್ರಿಕೆಗಳು ಪುಟ ತುಂಬಿಸುತ್ತಿವೆ; ದೊಡ್ಡದೇನೋ ನಡೆಯುತ್ತಿದೆಯೆಂಬ ಭ್ರಮೆ ಹುಟ್ಟಿಸುತ್ತಿವೆ.

ಆದರೆ, ದಿನ ದಿನಕ್ಕೆ ಹೆಚ್ಚುತ್ತಿರುವ ಜನಸಾಮಾನ್ಯರ–ಬಡವರ ಕಷ್ಟಗಳಿಗೆ ಪರಿಹಾರ ದೊರಕಿಸುವಲ್ಲಿ ಪದೇ ಪದೇ ಬಂದು ಹೋಗುತ್ತಿರುವ ಈ ಚುನಾವಣೆಗಳು ಏನೂ ಸಹಾಯಕವಾಗಿಲ್ಲ, ಬದಲು ಕಂಟಕಪ್ರಾಯವಾಗಿವೆ ಎಂಬ ಸತ್ಯ ಮಾತ್ರ ಈ ಗಜಿಬಿಜಿಯಲ್ಲಿ ಮೂಲೆ ಗುಂಪಾಗುತ್ತದೆ.

ಲೋಕಸಭಾ ಚುನಾವಣೆ, ವಿಧಾನ ಸಭೆ ಚುನಾವಣೆ, ಮಧ್ಯಂತರ ಚುನಾವಣೆ, ಮರು ಚುನಾವಣೆ ಎಂದು ವರ್ಷಕ್ಕೊಮ್ಮೆಯೆಂಬಂತೆ ಬರುವ ಈ ಚುನಾವಣೆಗಳು ಜನರಿಗೆ ತರುವ ಬವಣೆ ಅವರ್ಣನೀಯ. ಚುನಾವಣೆ ಘೋಷಣೆಯಾದಂದಿನಿಂದ ಹಿಡಿದು ಚುನಾವಣೆ ಮುಗಿದು ಎಲ್ಲಾ ಒಂದು ತಹಬಂದಿಗೆ ಬರುವವರೆಗಿನ ಸುಮಾರು 3 ತಿಂಗಳು ಕಾಲ ಯಾವ ಸರ್ಕಾರಿ ಕಚೇರಿಗೆ ಹೋದರೂ "ಚುನಾವಣೆ ಬ್ಯುಸಿ ಕಣ್ರೀ. ಚುನಾವಣೆ ಮುಗಿದ್ಮೇಲೆ ನೋಡೋಣ". ಯಾವ ಮುಖಂಡನ ಹತ್ತಿರ ಹೋದರೂ 'ಬಿಡುವಿಲ್ಲ, ಚುನಾವಣೆ ಬಂತು.' ಬೆಳೆದ ಪೈರು ನೀರಿಲ್ಲದೆ ಒಣಗುತ್ತದೆ, ಕೊಯ್ದ ಫಸಲು ಸಾಗಣೆಗೆ ರಸ್ತೆಯಿಲ್ಲದೆ ಮುಗ್ಗುತ್ತದೆ....ಆದರೆ ಚುನಾವಣೆ ಆಗುವವರೆಗೆ ಕೇಳುವವರಿಲ್ಲ.

ಒಂದು ಚುನಾವಣೆಯಿಂದ ಇನ್ನೊಂದು ಚುನಾವಣೆಗೆ ಜನರ ನಿರೀಕ್ಷೆ, ಆಸಕ್ತಿ, ಉತ್ಸಾಹಗಳು ಕುಸಿಯುತ್ತಿವೆ, ಅವು ಈ ಸಲ ಇನ್ನೂ ಕುಸಿದಿವೆ.

ರಾಜಕೀಯ ಪಕ್ಷಗಳು ಪೇಟೆ ಬದಿ ದೊಡ್ಡ ದೊಡ್ಡ ಪ್ರಚಾರ ಕಚೇರಿಗಳನ್ನು ತೆರೆದು, ಧ್ವನಿವರ್ಧಕ ಹಾಕಿ, ಕಾರು ಜೀಪು ಓಡಿಸಿ, ಜನರಲ್ಲಿ ಚುನಾವಣೆಯ ಜ್ವಾಪಕವುಳಿಸಲು ಹೆಣಗುತ್ತಿದ್ದರೆ ಹಳ್ಳಿಗಳಲ್ಲಿ ಹಲವೆಡೆ ಈ ಆಟ ಕಟ್ಟುವವರಿಗೂ ಗತಿಯಿಲ್ಲವಾಗಿರುವುದು ಎದ್ದು ಕಾಣುತ್ತಿದೆ. ಜನರಿಗಂತೂ ಈಗ ಒಳ್ಳೆ ಕೊಯ್ಲಿನ ಕಾಲ. ಅದರ ಮೇಲೆ ಚುನಾವಣೆಗಳ ಬಗ್ಗೆಯೇ ಭ್ರಮ ನಿರಸನವಾದ ನಿರಾಸಕ್ತಿ. ಹೀಗಾಗಿ ಹಳ್ಳಿಗಳಲ್ಲಿ ಅಲ್ಲಲ್ಲಿ ಇರುವ ಕಾರ್ಯಕರ್ತರಿಗೂ ಪ್ರಚಾರದ ಧೂಳು–ಗಲಾಟೆ ಎಬ್ಬಿಸಿ, ಜನರಲ್ಲಿ ಉತ್ಸಾಹ ಮೂಡಿಸುವುದು ಕಷ್ಟವಾಗುತ್ತಿದೆ. ಪತ್ರಿಕೆಗಳಲ್ಲೂ ಇದು ವರದಿಯಾಗುತ್ತಿದೆ.

ಚಿಕ್ಕಮಗಳೂರಿಗೆ ಬಂದರೆ ....

ಚಿಕ್ಕಮಗಳೂರು ಕ್ಷೇತ್ರಕ್ಕೆ ಬಂದರೆ, ಈ ನಿರಾಸಕ್ತಿ ಇನ್ನಷ್ಟು ಆಳವಾಗಿ ಕಾಣುತ್ತದೆ, ಜೊತೆಗೆ ವಿಲಕ್ಷಣ ಗೊಂದಲದ ಛಾಯೆಯೂ ಇದೆ.

ಕಾಂಗ್ರೆಸ್ಸಿನವರಿಗೆ, ಒಂದೆಡೆ ಜನತಾ ಪ್ರತಿಸ್ಪರ್ಧಿ ಕಣದಲ್ಲಿಲ್ಲದಿರುವುದು ಪ್ರತಿಸ್ಪರ್ಧಿಯೇ ಇಲ್ಲದಷ್ಟು ಹಗುರವೆನಿಸಿ ಇಮ್ಮಡಿ ಉತ್ಸಾಹ ಹಾಗೂ ಹಣಾಹಣಿ ಹೆಣಗುವ ಅವಶ್ಯಕತೆ ಕಾಣದೆ ಪ್ರಚಾರ ಕಾರ್ಯದಲ್ಲಿ ಸಡಿಲತೆ ಎರಡೂ ಕಂಡು ಬರುತ್ತಿದ್ದರೆ ಇನ್ನೊಂದು ಕಡೆ, ಇತ್ತೀಚೆಗಷ್ಟೇ ಪಕ್ಷದೊಳಕ್ಕೆ ಬಂದವರಿಗೆ ಸಿಗುತ್ತಿರುವ ಅವಕಾಶ, ಅಭ್ಯರ್ಥಿಯ ಆಯ್ಕೆಯ ಬಗ್ಗೆ ಒಂದು ಬಣದಲ್ಲಿ ಇದೆಯೆನ್ನಲಾಗುತ್ತಿರುವ ಅಸಮಾಧಾನ–ಇವುಗಳಿಂದಲೂ ಒಂದಷ್ಟು ಜನರಲ್ಲಿ ನಿರುತ್ಸಾಹ ಕವಿದಿರುವುದಾಗಿ ಹೇಳಲಾಗುತ್ತಿದೆ. ಆದರೆ ಪ್ರಕಟದಲ್ಲಿ ಇದೆಲ್ಲ ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ. ಇವರ ಅಭ್ಯರ್ಥಿ ಡಿ. ಕೆ. ತಾರಾದೇವಿಯವರ ಬೆಂಬಲಿಗರ ಸಂಖ್ಯೆಯೂ ಕಮ್ಮಿಯೇನಲ್ಲ.

"ಅಭ್ಯರ್ಥಿಯನ್ನು ನೋಡಬೇಕು"

ಸಾಲದ್ದಕ್ಕೆ ಸಿಪಿಐ ಪಕ್ಷ ಮತ್ತು ಅದರ ಅಭ್ಯರ್ಥಿ ಇಬ್ಬರೂ ಈ ಕ್ಷೇತ್ರದ ಹಲವೆಡೆ ಅಪರಿಚಿತರು. ಸಿಪಿಐ ಕಾರ್ಯಕರ್ತರು ತೋಟ ಕಾರ್ಮಿಕರ ವಲಯದಲ್ಲಿ ಸಾಕಷ್ಟು ದೊಡ್ಡ ಭಾಗವನ್ನು ತಮ್ಮ ಪೆಟ್ಟಿಗೆಗೆ ಹಾಕಿಕೊಳ್ಳುತ್ತೇವೆಂದು—ತಾವು ಆ ವಲಯದಲ್ಲಿ ಕೆಲಸ ಮಾಡಿರುವ ಆತ್ಮ ವಿಶ್ವಾಸದ ಆಧಾರದಿಂದ–ಹೇಳುತ್ತಿದ್ದರೂ, ಶೃಂಗೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಹಲವು ಎಸ್ಟೇಟುಗಳಲ್ಲಿ ಕಾರ್ಮಿಕರು, 'ಅಭ್ಯರ್ಥಿಯನ್ನೊಮ್ಮೆ ಇಲ್ಲಿಗೆ ಕರೆತನ್ನಿ ನಾವು ಅವರನ್ನು ನೋಡಬೇಕು' ಎನ್ನುತ್ತಿದ್ದಾರಂತೆ. ಆದರೂ ಕಳೆದ ಒಂದು ವಾರದಿಂದ ಅವರ ಆತ್ಮ ವಿಶ್ವಾಸವೂ ಗಣನೀಯವಾಗಿ ಹೆಚ್ಚುವಷ್ಟರ ಮಟ್ಟಿಗೆ ಪರಿಸ್ಥಿತಿ ಮಾರ್ಪಾಡಾಗಿರುವುದು ಸ್ಪಷ್ಟವಿದೆ.

ಇತ್ತ ರೈತ ಸಂಘದ ಬೆಂಬಲಿತ ಅಭ್ಯರ್ಥಿ "ಮತದಾರರ ವೇದಿಕೆ"ಯ ಲೋಕೇಶಗೌಡರ ಪ್ರಚಾರಕಾರ್ಯ ದಯನೀಯವಾಗಿಯೇ (ಶೃಂಗೇರಿ ಕ್ಷೇತ್ರದ ಮಟ್ಟಿಗಾದರೂ) ಇದೆ. "ಮತದಾರರ ವೇದಿಕೆ"ಯ ಇನ್ನೊಬ್ಬ (ಡಮ್ಮಿ) ಅಭ್ಯರ್ಥಿ ತರೀಕೆರೆಯ ಡಾ॥ ಗಂಗಾಧರಪ್ಪ ಈಚೆಗೆ ಸ್ಪರ್ಧೆಯಿಂದ ನಿವೃತ್ತಿಯಾಗಿರುವುದು ಒಂದು ಸಮಾಧಾನದ ವಿಷಯವಾದರೂ, ವಾಹನ ಮತ್ತು ಹಣಕಾಸಿನ ವ್ಯವಸ್ಥೆ ಆಯಾ ಘಟಕದ ಕಾರ್ಯಕರ್ತರೇ ಮಾಡಿಕೊಳ್ಳಬೇಕಾಗಿರುವುದರಿಂದ ಅದರ ಬಿಕ್ಕಟ್ಟು ರೈತ ಸಂಘದ ಕಾರ್ಯಕರ್ತರನ್ನು ಕಂಗೆಡಿಸಿದೆ. ಆದರೂ ಎಲ್ಲರ ನಿರೀಕ್ಷೆಯನ್ನೂ ಮೀರಿ ಈ ಅಭ್ಯರ್ಥಿ ಗಣನೀಯ ಸಂಖ್ಯೆಯ ಮತ ಪಡೆಯುವ ಸಂಭವವಿದೆ.

(2ನೇ ಪುಟಕ್ಕೆ)

'ಜೋಟಾ' ಉಮೇದುವಾರರು!

ಈ ಸಲದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಹಲವಾರು ಅಭ್ಯರ್ಥಿಗಳ ಉಮೇದುವಾರಿಕೆ ಪ್ರಾಮಾಣಿಕವಲ್ಲ. ಹೆಚ್ಚಿನವರು ರಾಜಕೀಯವಾಗಿ ಪ್ರಾಮಾಣಿಕರಲ್ಲ ಮತ್ತು ರಾಜಕಾರಣಿಗಳೂ ಅಲ್ಲ. ಅವರೆಲ್ಲ ಅಭ್ಯರ್ಥಿಗಳಿಗೆ ಸಿಗುವ ಪೆಟ್ರೋಲ್ ರಿಯಾಯ್ತಿ, 6 ತಿಂಗಳ ಟೆಲಿಫೋನ್ ಸೌಲಭ್ಯ ಮುಂತಾದ ಸವಲತ್ತುಗಳಿಗಾಗಿ ನಿಂತವರು ಎಂದು ಮುಖ್ಯ ಚುನಾವಣಾ ಕಮಿಶನರ್ ಆರ್.ಕೆ. ತ್ರಿವೇದಿ ಎಚ್ಚರಿಸಿದ್ದಾರೆ.

ನಡೆಯುತಿದೆ ಪಂಚವಾರ್ಷಿಕ ಸಂತೆ ...

ಹೆಗಡೆ ಸರಕಾರವೊಂದು ಸಗಟು
ಬೇರೆಯಾದರೆ ಹಸ ಬೆಟ್ಟಿ ಗೋಟು
ಆಗ ಇದಕಿಲ್ಲ ಸೌಧದಲಿ ಸೀಟು
ಅದಕಾಗೇ ಕೇಳುತಿದೆ ಮಿತ್ರ ಪಕ್ಷಕ್ಕೂ ಓಟು
ಇಂದಿರಾ ಕಾಂಗ್ರೇಸಿನಲಿ ಪೂರ್ವಪದ ಈಗಿಲ್ಲಾ
ಪಕ್ಷದಾ ಅಭ್ಯರ್ಥಿಗೆ ನಾಮ ಬಲವಿಲ್ಲಾ
ಹಳೆಯ ಹುಲಿಗಳಿಗಂತೂ ಟಿಕೇಟೇ ಸಿಗಲಿಲ್ಲಾ
ಅಡ್ಡ ದೇಖಿಗಳೆ ಹೆಚ್ಚು ಹಸ್ತದಲ್ಲೆಲ್ಲಾ
ಸಿ. ಪಿ. ಐ. ಗೆ ಈಗ ಮಿತ್ರ ಪಕ್ಷದ ರಕ್ಷೆ
ಬಿ. ಜೆ. ಪಿ. ಗಂತೂ ಇದು ತಾಳಲಾರದ ಶಿಕ್ಷೆ
ಕುಂಟುತ್ತಾ ಸಾಗುತಿದೆ ಈ ಮಿತ್ರ ವ್ಯೂಹವಾ ಕಕ್ಷೆ
ಅರಿಯದಾಗಿದೆ ಈಗ ಮತದಾರರಾ ದೀಕ್ಷೆ
ಪಕ್ಷೇತರರಿಗೆ ಈಗ ಠೇವಣಿಯ ಚಿಂತೆ
ಎಲ್ಲರೂ ಬರುತಿಹರು ಗಾಂಧಿ ವಾದಿಗಳಂತೆ
ಬಾಷಣಗಳಲ್ಲೆಲ್ಲಾ ರಾಮರಾಜ್ಯದ ಮಾತೇ
ಒಟ್ಟಿನಲಿ ನಡೆಯುತಿದೆ ಈ ಪಂಚವಾರ್ಷಿಕ ಸಂತೆ

ಸೂರ್ಗೋಡು ಕೃಷ್ಣಮೂರ್ತಿ

ಡಿ. 30 ರಂದು ಕೊಪ್ಪ, ಕೊಡ್ತಿಪಿತ್ಲಿನಲ್ಲಿ

ಉಚಿತ ವೈದ್ಯಕೀಯ ಶಿಬಿರಗಳು

ಕೊಪ್ಪ: ಇಲ್ಲಿನ ಪುರಭವನದಲ್ಲಿ ಡಿ. 30 ರಂದು ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜಿನ ಡಾ॥ ಶ್ರೀನಿವಾಸರಾವ್ ಮತ್ತು ತಂಡದವರಿಂದ ಉಚಿತ ಕಣ್ಣಿನ ಪರೀಕ್ಷೆ ಹಾಗೂ ತೀರ್ಥಹಳ್ಳಿಯ ಡಾ॥ ನಾರಾಯಣ ಸ್ವಾಮಿ ಇವರಿಂದ ಸಿಹಿಮೂತ್ರ ಕಾಯಿಲೆಯ (ಡಯಾಬಿಟೀಸ್) ಬಗ್ಗೆ ಉಚಿತ ಪರೀಕ್ಷೆ ಮತ್ತು ಸಲಹೆಯ ಶಿಬಿರವನ್ನು ಇಲ್ಲಿನ ಲಯನ್ಸ್ ಕ್ಲಬ್ ಏರ್ಪಡಿಸಿದೆ.

ಅದೇ ದಿನ ಕೊಡತಿಪಿತ್ಲಿನ ಆಸ್ಪತ್ರೆಯವತಿಯಿಂದ ಏರ್ಪಡಿಸಿರುವ ಶಿಬಿರದಲ್ಲಿ ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ತಜ್ಞ ವೈದ್ಯರು, ಶಸ್ತ್ರ ವೈದ್ಯರು, ಮಕ್ಕಳ ರೋಗ ತಜ್ಞರು, ಮನಃ ಶಾಸ್ತ್ರಜ್ಞರು, ಹಾಗೂ ದಂತ ವೈದ್ಯರುಗಳಿಂದ ಉಚಿತ ಪರೀಕ್ಷೆ ಮತ್ತು ಸಲಹೆಗಳನ್ನು ನೀಡಲಾಗುವುದು.

ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್
ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ - 19
ನೇ ವರ್ಷ 17ನೇ ಸಂಚಿಕೆ ಕೊಪ್ಪ 23-12-1984 ಭಾನುವಾರ ಬೆಲೆ 20 ಪೈಸೆ

ಜನರ ಬವಣೆಯ ನಡುವೆ ಮುಗಿಯದ ಚುನಾವಣೆಗಳ ಸಾಲು :
ಮತದಾರರ ನಿರಾಸಕ್ತಿಯೇ ಪ್ರಧಾನ ಅಂಶ

ಈಗ ಯಾವ ಪತ್ರಿಕೆಯನ್ನು ನೋಡಿ ರೂ ಚುನಾವಣೆಯ ಸುದ್ದಿಗಳೇ ತುಂಬಿರು ವೆ. ಜನತೆಗೆ ಚುನಾವಣೆಯಲ್ಲಿ ಆಸಕ್ತಿ ರಲಿ-ಬಿಡಲಿ, ಆಸಕ್ತಿಯಿದ್ದರೂ ಸುದ್ದಿ ಾಡಿ, ಆಸಕ್ತಿಯಿಲ್ಲದಿದ್ದರೂ ಹಾಗಂತಲೇ ರೆದು ಪತ್ರಿಕೆಗಳು ಪುಟ ತುಂಬಿಸುತ್ತಿವೆ; ೊಡ್ಡದೇನೋ ನಡೆಯುತ್ತಿದೆಯೆಂಬ ಮೆ ಹುಟ್ಟಿಸುತ್ತಿವೆ.

ಆದರೆ, ದಿನ ದಿನಕ್ಕೆ ಹೆಚ್ಚುತ್ತಿರುವ ನಸಾಮಾನ್ಯರ-ಬಡವರ ಕಷ್ಟಗಳಿಗೆ ಪರಿ ಾರ ದೊರಕಿಸುವಲ್ಲಿ ಪದೇ ಪದೇ ಬಂದು ೋಗುತ್ತಿರುವ ಈ ಚುನಾವಣೆಗಳು ಏ ಸಹಾಯಕವಾಗಿಲ್ಲ, ಬದಲು ಕಂಟಕ ಪ್ರಾಯವಾಗಿವೆ ಎಂಬ ಸತ್ಯ ಮಾತ್ರ ಈ ಜಿಬಿಜಿಯಲ್ಲಿ ಮೂಲೆ ಗುಂಪಾಗುತ್ತದೆ.

ಲೋಕಸಭಾ ಚುನಾವಣೆ, ವಿಧಾನ ಸಭೆ ುನಾವಣೆ, ಮಧ್ಯಂತರ ಚುನಾವಣೆ, ಾರು ಚುನಾವಣೆ ಎಂದು ವರ್ಷಕ್ಕೊಮ್ಮೆ ಂಬಂತೆ ಬರುವ ಈ ಚುನಾವಣೆಗಳು ನರಿಗೆ ತರುವ ಬವಣೆ ಅವರ್ಣನೀಯ. ುನಾವಣೆ ಘೋಷಣೆಯಾದಂದಿನಿಂದ ಡಿದು ಚುನಾವಣೆ ಮುಗಿದು ಎಲ್ಲಾ ಒಂ ತಹಬಂದಿಗೆ ಬರುವವರೆಗಿನ ಸುಮಾರು ತಿಂಗಳು ಕಾಲ ಯಾವ ಸರ್ಕಾರಿ ಕಚೇ ಹೋದರೂ "ಚುನಾವಣೆ ಬ್ಯುಸಿ ಕ ೀ. ಚುನಾವಣೆ ಮುಗಿದ್ಮೇಲೆ ನೋಡೋಣ". ಯಾವ ಮುಖಂಡನ ಹತ್ತಿರ ಹೋದರೂ 'ಬಿಡುವಿಲ್ಲ, ಚುನಾವಣೆ ಬಂತು.' ಬೆಳೆದ ಪೈರು ನೀರಿಲ್ಲದೆ ಒಣಗುತ್ತದೆ, ಕೊಯ್ದ ಫಸಲು ಸಾಗಣೆಗೆ ರಸ್ತೆಯಿಲ್ಲದೆ ಮುಗ್ಗುತ್ತದೆ....ಆದರೆ ಚುನಾವಣೆ ಆಗುವ ವರೆಗೆ ಕೇಳುವವರಿಲ್ಲ.

ಒಂದು ಚುನಾವಣೆಯಿಂದ ಇನ್ನೊಂದು ಚುನಾವಣೆಗೆ ಜನರ ನಿರೀಕ್ಷೆ, ಆಸಕ್ತಿ, ಉತ್ಸಾಹಗಳು ಕುಸಿಯುತ್ತಿವೆ, ಅವು ಈ ಸಲ ಇನ್ನೂ ಕುಸಿದಿವೆ.

ರಾಜಕೀಯ ಪಕ್ಷಗಳು ಪೇಟೆ ಬದಿ ದೊಡ್ಡ ದೊಡ್ಡ ಪ್ರಚಾರ ಕಚೇರಿಗಳನ್ನು ತೆರೆದು, ಧ್ವನಿವರ್ಧಕ ಹಾಕಿ, ಕಾರು ಜೀಪು ಓಡಿಸಿ, ಜನರಲ್ಲಿ ಚುನಾವಣೆಯ ಜ್ಞಾಪಕವುಳಿಸಲು ಹೆಣಗುತ್ತಿದ್ದರೆ ಹಳ್ಳಿಗಳಲ್ಲಿ ಹಲವೆಡೆ ಈ ಆಟ ಕಟ್ಟುವವರಿಗೂ ಗತಿಯಿಲ್ಲವಾಗಿರುವುದು ಎದ್ದು ಕಾಣುತ್ತಿದೆ. ಜನರಿಗಂತೂ ಈಗ ಒಳ್ಳೆ ಕೊಯ್ಲಿನಕಾಲ. ಅದರ ಮೇಲೆ ಚುನಾವಣೆಗಳ ಬಗ್ಗೆಯೇ ಭ್ರಮನಿರಸನವಾದ ನಿರಾಸಕ್ತಿ. ಹೀಗಾಗಿ ಹಳ್ಳಿಗಳಲ್ಲಿ ಅಲ್ಲಲ್ಲಿ ಇರುವ ಕಾರ್ಯಕರ್ತರಿಗೂ ಪ್ರಚಾರದ ಧೂಳು-ಗಲಾಟೆ ಎಬ್ಬಿಸಿ, ಜನರಲ್ಲಿ ಉತ್ಸಾಹ ಮೂಡಿಸುವುದು ಕಷ್ಟವಾಗುತ್ತಿದೆ. ಪತ್ರಿಕೆಗಳಲ್ಲೂ ಇದು ವರದಿಯಾಗುತ್ತಿದೆ.

ಚಿಕ್ಕಮಗಳೂರಿಗೆ ಬಂದರೆ ....

ಚಿಕ್ಕಮಗಳೂರು ಕ್ಷೇತ್ರಕ್ಕೆ ಬಂದರೆ, ಈ ನಿರಾಸಕ್ತಿ ಇನ್ನಷ್ಟು ಆಳವಾಗಿ ಕಾಣುತ್ತದೆ, ಜೊತೆಗೆ ವಿಲಕ್ಷಣ ಗೊಂದಲದ ಛಾಯೆಯೂ ಇದೆ.

ಕಾಂಗ್ರೆಸ್ಸಿನವರಿಗೆ, ಒಂದೆಡೆ ಜನತಾ ಪ್ರತಿಸ್ಪರ್ಧಿ ಕಣದಲ್ಲಿಲ್ಲದಿರುವುದು ಪ್ರತಿಸ್ಪರ್ಧಿಯೇ ಇಲ್ಲದಷ್ಟು ಹಗುರವೆನಿಸಿ ಇಮ್ಮಡಿ ಉತ್ಸಾಹ ಹಾಗೂ ಹಣಾಹಣಿ ಹೆಣಗುವ ಅವಶ್ಯಕತೆ ಕಾಣದೆ ಪ್ರಚಾರ ಕಾರ್ಯದಲ್ಲಿ ಸಡಿಲತೆ ಎರಡೂ ಕಂಡು ಬರುತ್ತಿದ್ದರೆ ಇನ್ನೊಂದು ಕಡೆ, ಈಚೆಗಷ್ಟೇ ಪಕ್ಷದೊಳಕ್ಕೆ ಬಂದವರಿಗೆ ಸಿಗುತ್ತಿರುವ ಅವಕಾಶ, ಅಭ್ಯರ್ಥಿಯ ಆಯ್ಕೆಯ ಬಗ್ಗೆ ಒಂದು ಬಣದಲ್ಲಿ ಇದೆಯೆನ್ನಲಾಗುತ್ತಿರುವ ಅಸಮಾಧಾನ- ಇವುಗಳಿಂದಲೂ ಒಂದಷ್ಟು ಜನರಲ್ಲಿ ನಿರುತ್ಸಾಹ ಕವಿದಿರುವುದಾಗಿ ಹೇಳಲಾಗುತ್ತಿದೆ. ಆದರೆ ಪ್ರಕಟದಲ್ಲಿ ಇದೆಲ್ಲ ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ. ಇವರ ಅಭ್ಯರ್ಥಿ ಡಿ. ಕೆ. ತಾರಾದೇವಿಯವರ ಬೆಂಬಲಿಗರ ಸಂಖ್ಯೆಯೂ ಕಮ್ಮಿಯೇನಲ್ಲ.

"ಅಭ್ಯರ್ಥಿಯನ್ನು ನೋಡಬೇಕು"

ಸಾಲದ್ದಕ್ಕೆ ಸಿಪಿಐ ಪಕ್ಷ ಮತ್ತು ಅದರ ಅಭ್ಯರ್ಥಿ ಇಬ್ಬರೂ ಈ ಕ್ಷೇತ್ರದ ಹಲವೆಡೆ ಅಪರಿಚಿತರು. ಸಿಪಿಐ ಕಾರ್ಯಕರ್ತರು ತೋಟ ಕಾರ್ಮಿಕರ ವಲಯದಲ್ಲಿ ಸಾಕಷ್ಟು ದೊಡ್ಡ ಭಾಗವನ್ನು ತಮ್ಮ ಪೆಟ್ಟಿಗೆಗೆ ಹಾಕಿಕೊಳ್ಳುತ್ತೇವೆಂದು—ತಾವು ಆ ವಲಯದಲ್ಲಿ ಕೆಲಸ ಮಾಡಿರುವ ಆತ್ಮ ವಿಶ್ವಾಸದ ಆಧಾರದಿಂದ-ಹೇಳುತ್ತಿದ್ದರೂ, ಶೃಂಗೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಹಲವು ಎಸ್ಟೇಟುಗಳಲ್ಲಿ ಕಾರ್ಮಿಕರು, 'ಅಭ್ಯರ್ಥಿಯನ್ನೊಮ್ಮೆ ಇಲ್ಲಿಗೆ ಕರೆತನ್ನಿ ನಾವು ಅವರನ್ನು ನೋಡಬೇಕು' ಎನ್ನುತ್ತಿದ್ದಾರಂತೆ. ಆದರೂ ಕಳೆದ ಒಂದು ವಾರದಿಂದ ಅವರ ಆತ್ಮವಿಶ್ವಾಸವೂ ಗಣನೀಯವಾಗಿ ಹೆಚ್ಚುವಷ್ಟರ ಮಟ್ಟಿಗೆ ಪರಿಸ್ಥಿತಿ ಮಾರ್ಪಾಡಾಗಿರುವುದು ಸ್ಪಷ್ಟವಿದೆ.

ಇತ್ತ ರೈತ ಸಂಘದ ಬೆಂಬಲಿತ ಅಭ್ಯರ್ಥಿ "ಮತದಾರರ ವೇದಿಕೆ"ಯ ಲೋಕೇಶಗೌಡರ ಪ್ರಚಾರಕಾರ್ಯ ದಯನೀಯವಾಗಿಯೇ (ಶೃಂಗೇರಿ ಕ್ಷೇತ್ರದ ಮಟ್ಟಿಗಾದರೂ) ಇದೆ. "ಮತದಾರರ ವೇದಿಕೆ"ಯ ಇನ್ನೊಬ್ಬ (ಡಮ್ಮಿ) ಅಭ್ಯರ್ಥಿ ತರೀಕೆರೆಯ ಡಾ|| ಗಂಗಾಧರಪ್ಪ ಈಚೆಗೆ ಸ್ಪರ್ಧೆಯಿಂದ ನಿವೃತ್ತಿಯಾಗಿರುವುದು ಒಂದು ಸಮಾಧಾನದ ವಿಷಯವಾದರೂ, ವಾಹನ ಮತ್ತು ಹಣಕಾಸಿನ ವ್ಯವಸ್ಥೆ ಆಯಾ ಘಟಕದ ಕಾರ್ಯಕರ್ತರೇ ಮಾಡಿಕೊಳ್ಳಬೇಕಾಗಿರುವುದರಿಂದ ಅದರ ಬಿಕ್ಕಟ್ಟು ರೈತ ಸಂಘದ ಕಾರ್ಯಕರ್ತರನ್ನು ಕಂಗೆಡಿಸಿದೆ. ಅವರೂ ಎಲ್ಲರ ನಿರೀಕ್ಷೆಯನ್ನೂ ಮೀರಿ ಈ ಅಭ್ಯರ್ಥಿ ಗಣನೀಯ ಸಂಖ್ಯೆಯ ಮತ ಪಡೆಯುವ ಸಂಭವವಿದೆ. (2ನೇ ಪುಟಕ್ಕೆ)

ಶೃಂಗೇರಿ ಕ್ಷೇತ್ರದ ಬಿ. ಜೆ. ಪಿ. ನಿಲುವು

ಶೃಂಗೇರಿ ಕ್ಷೇತ್ರದ ಬಿ.ಜೆ.ಪಿ. ಮತದಾರರು ಕಾಂಗ್ರೆಸ್ ಮತ್ತು ಸಿ. ಪಿ. ಐ. ಎರಡನ್ನೂ ವಿರೋಧಿಸುತ್ತಿದ್ದು, ಮತದಾರರ ವೇದಿಕೆಯ ಅಭ್ಯರ್ಥಿಗೆ ಬಿ. ಜೆ. ಪಿ. ಯ ಬೆಂಬಲ ಸಿಕ್ಕಿದಲ್ಲಿ ಗೆಲ್ಲುವ ಸಂಭವವಿದೆ. ಶಿವಮೊಗ್ಗ ಕ್ಷೇತ್ರದಲ್ಲಿ ರೈತ ಸಂಘದ ಅಭ್ಯರ್ಥಿ ನಿವೃತ್ತರಾಗಿ ಬಿ. ಜೆ. ಪಿ.ಗೆ ಬೆಂಬಲಿಸಿದರೆ, ಚಿಕ್ಕಮಗಳೂರು ಕ್ಷೇತ್ರಾದ್ಯಂತ ರೈತ ಸಂಘದ ಅಭ್ಯರ್ಥಿಗೆ ಬೆಂಬಲ ಕೊಡುವುದಾಗಿ ಶೃಂಗೇರಿ ಕ್ಷೇತ್ರದ ಬಿ.ಜೆ.ಪಿ. ಕಾರ್ಯದರ್ಶಿ ಕೆ.ಬಿ. ಶಿವಸ್ವಾಮಿ ತಿಳಿಸಿ, "ಬಿ.ಜೆ.ಪಿ. ಕಾಂಗ್ರೆಸ್ ಪರವಾಗಿ ಪ್ರಚಾರ ಮಾಡಿತ್ತು ಎಂಬ 9.12.84 ರ 'ಮುಂಜಾವು' ವರದಿಯನ್ನು ನಿರಾಕರಿಸುವುದಾಗಿ ಹೇಳಿಕೆ ನೀಡಿದ್ದಾರೆ.

(ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಕ್ಷೇತ್ರದ ಕೆಲವೆಡೆ ಆರೆಸ್ಸೆಸ್ಸಿನವರು "ಜೇಗಾಣೆ ಗೆದ್ದರೆ ಗುಂಡೂರಾವ್ ಬಲ ಹೆಚ್ಚುತ್ತೆ...." ಎಂದು ಪ್ರಚಾರ ಮಾಡಿದ್ದರೆಂಬ ನಮ್ಮ ವರದಿಗೆ ನಮ್ಮಲ್ಲಿ ಪುರಾವೆ ಇದೆ. 'ಬಿ.ಜೆ.ಪಿ.' ಎಂದು ಬರೆದಿಲ್ಲ. —ಸಂ.)

'ಜೋಟಾ' ಉಮೇದುವಾರರು!

ಈ ಸಲದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಹಲವಾರು ಅಭ್ಯರ್ಥಿಗಳ ಉಮೇದುವಾರಿಕೆ ಪ್ರಾಮಾಣಿಕವಲ್ಲ. ಹೆಚ್ಚಿನವರು ರಾಜಕೀಯವಾಗಿ ಪ್ರಾಮಾಣಿಕರಲ್ಲ ಮತ್ತು ರಾಜಕಾರಣಿಗಳೂ ಅಲ್ಲ. ಅವರೆಲ್ಲ ಅಭ್ಯರ್ಥಿಗಳಿಗೆ ಸಿಗುವ ಪೆಟ್ರೋಲ್ ರಿಯಾಯ್ತಿ, 6 ತಿಂಗಳ ಟೆಲಿಫೋನ್ ಸೌಲಭ್ಯ ಮುಂತಾದ ಸವಲತ್ತುಗಳಿಗಾಗಿ ನಿಂತವರು ಎಂದು ಮುಖ್ಯ ಚುನಾವಣಾ ಕಮಿಶನರ್ ಆರ್.ಕೆ. ತ್ರಿವೇದಿ ಎಚ್ಚರಿಸಿದ್ದಾರೆ.

ನಡೆಯುತಿದೆ ಪಂಚವಾರ್ಷಿಕ ಸಂತೆ ...

ಹೆಗಡೆ ಸರಕಾರವೊಂದು ಸಗಟು
ಬೇರೆಯಾದರೆ ಹಸ ಬೆಟ್ಟಿ ಗೋಟು
ಆಗ ಇದಕಿಲ್ಲ ಸೌಧದಲಿ ಸೀಟು
ಅದಕಾಗೇ ಕೇಳುತಿದೆ ಮಿತ್ರ ಪಕ್ಷಕ್ಕೂ ಓಟು
ಇಂದಿರಾ ಕಾಂಗ್ರೇಸಿನಲಿ ಪೂರ್ವಪದ ಈಗಿಲ್ಲಾ
ಪಕ್ಷದಾ ಅಭ್ಯರ್ಥಿಗೆ ನಾಮ ಬಲವಿಲ್ಲಾ
ಹಳೆಯ ಹುಲಿಗಳಿಗಂತೂ ಟಿಕೇಟೇ ಸಿಗಲಿಲ್ಲಾ
ಅಡ್ಡ ರೇಖೆಗಳೆ ಹೆಚ್ಚು ಹಸ್ತದಲ್ಲೆಲ್ಲಾ
ಸಿ. ಪಿ. ಐ. ಗೆ ಈಗ ಮಿತ್ರ ಪಕ್ಷದ ರಕ್ಷೆ
ಬಿ. ಜೆ. ಪಿ. ಗಂತೂ ಇದು ತಾಳಲಾರದ ಶಿಕ್ಷೆ
ಕುಂಟುತಾ, ಸಾಗುತಿದೆ ಈ ಮಿತ್ರ ವ್ಯೂಹವಾ ಕಕ್ಷೆ
ಅರಿಯದಾಗಿದೆ ಈಗ ಮತದಾರರಾ ದೀಕ್ಷೆ
ಪಕ್ಷೇತರರಿಗೆ ಈಗ ಠೇವಣಿಯ ಚಿಂತೆ
ಎಲ್ಲರೂ ಬರುತಿಹರು ಗಾಂಧಿ ವಾದಿಗಳಂತೆ
ಬಾಷಣಗಳಲ್ಲೆಲ್ಲಾ ರಾಮರಾಜ್ಯದ ಮಾತೇ
ಒಟ್ಟಿನಲಿ ನಡೆಯುತಿದೆ ಈ ಪಂಚವಾರ್ಷಿಕ ಸಂತೆ

ಸೂರ್ಗೋಡು ಕೃಷ್ಣಮೂರ್ತಿ

ಡಿ. 30 ರಂದು ಕೊಪ್ಪ, ಕೊರ್ಡಿಪಿತ್ತಿನಲ್ಲಿ
ಉಚಿತ ವೈದ್ಯಕೀಯ ಶಿಬಿರಗಳು

ಕೊಪ್ಪ: ಇಲ್ಲಿನ ಪುರಭವನದಲ್ಲಿ ಡಿ. 30 ರಂದು ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜಿನ ಡಾ|| ಶ್ರೀನಿವಾಸರಾವ್ ಮತ್ತು ತಂಡದವರಿಂದ ಉಚಿತ ಕಣ್ಣಿನ ಪರೀಕ್ಷೆ ಹಾಗೂ ತೀರ್ಥಹಳ್ಳಿಯ ಡಾ|| ನಾರಾಯಣ ಸ್ವಾಮಿ ಇವರಿಂದ ಸಿಹಿಮೂತ್ರ ಕಾಯಿಲೆಯ (ಡಯಾಬಿಟೀಸ್) ಬಗ್ಗೆ ಉಚಿತ ಪರೀಕ್ಷೆ ಮತ್ತು ಸಲಹೆಯ ಶಿಬಿರವನ್ನು ಇಲ್ಲಿನ ಲಯನ್ಸ್ ಕ್ಲಬ್ ಏರ್ಪಡಿಸಿದೆ.

ಅದೇ ದಿನ ಕೊರಡಿಪಿತ್ತಿನ ಆಸ್ಪತ್ರೆಯವತಿಯಿಂದ ಏರ್ಪಡಿಸಿರುವ ಶಿಬಿರದಲ್ಲಿ ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ತಜ್ಞ ವೈದ್ಯರು, ಶಸ್ತ್ರ ವೈದ್ಯರು, ಮಕ್ಕಳ ರೋಗ ತಜ್ಞರು, ಮನಃಶಾಸ್ತ್ರಜ್ಞರು, ಹಾಗೂ ದಂತ ವೈದ್ಯರುಗಳಿಂದ ಉಚಿತ ಪರೀಕ್ಷೆ ಮತ್ತು ಸಲಹೆಗಳನ್ನು ನೀಡಲಾಗುವುದು.

ನಿರಾಸಕ್ತಿಯೇ ಪ್ರಧಾನ ಅಂಶ

(1ನೇ ಪುಟದಿಂದ)

ಈ ಕ್ಷೇತ್ರದಲ್ಲಿ ನಿಜವಾದ ಸ್ಪರ್ಧೆಯಿರುವುದು ಈ ಮೂವರಲ್ಲೇ; ಉಳಿದಂತೆ ಚರಣಸಿಂಗ್ ಪಕ್ಷದ ಸಿ. ಎಂ. ಎಸ್. ಶಾಸ್ತ್ರಿ, 'ನಾವು ಕನ್ನಡಿಗರು' ಸಂಘಟನೆಯ ಎಂ. ಕೆ. ದಯಾನಂದ, ಪಕ್ಷೇತರರಾದ ಭೈರಪ್ಪ ಇವರುಗಳನ್ನು ಹೆಸರಿಸಬಹುದಾದರೂ ಇವರ ಸ್ಪರ್ಧೆ ಗಣನೀಯವಲ್ಲ. ಉಳಿದವರೆಲ್ಲ ಮುಖ್ಯ ಚುನಾವಣಾ ಕಮಿಶನರ್ ಆರ್. ಕೆ. ತ್ರಿವೇದಿ ಪಟ್ಟಿ ಮಾಡಿದಂಥವರು.

ಇನ್ನು, ಬಿಜೆಪಿಯ ಸಂದಿಗ್ಧದ ಕುರಿತು ಹೇಳುವುದಾದರೆ–ರಾಜ್ಯ ಮಟ್ಟದಲ್ಲಿ ಅದಕ್ಕೆ ಜನತಾ ಪಕ್ಷದ ಮೈತ್ರಿಯಿದೆ. ಆದರೆ ಸಿಪಿಐಯ ಉದ್ದೇಶ 'ಕಾಂಗ್ರೆ–ಬಿಜೆಪಿಗಳೆರಡನ್ನೂ ಸೋಲಿಸುವು'ದಾದ್ದರಿಂದ ಸಿಪಿಐ ಅಭ್ಯರ್ಥಿಗೆ ಮತ ನೀಡಲು ಬಾರದು. ರೈತ ಸಂಘದ ಶಿವಮೊಗ್ಗದ ಅಭ್ಯರ್ಥಿ ಸ್ಪರ್ಧೆಯಿಂದ ನಿವೃತ್ತರಾದರೆ ಇಲ್ಲಿ ಅವರ ಅಭ್ಯರ್ಥಿಗೆ ಬೆಂಬಲಿಸುವ ಬಿಜೆಪಿಯ ಶರತ್ತಿಗೆ ರೈತ ಸಂಘ ಒಪ್ಪಿವ ಸೂಚನೆಯಿಲ್ಲ. ಹಾಗಾಗಿ ಬಿಜೆಪಿ ಬೆಂಬಲಿಗರು ನಾಯಕರ ಮಾರ್ಗದರ್ಶನ ಕೇಳಿದರೆ ಉತ್ತರಿಸಲು ಅವರಿಗೆ ಸಂದಿಗ್ಧ. 'ಮತದಾನ ಮಾಡದಿದ್ದರೂ ಅಭ್ಯಂತರವಿಲ್ಲ' ಎಂಬುದು ಅವರ ಮಾರ್ಗದರ್ಶನ.

ಆದರೂ ಎಲ್ಲಾ ಬಿಜೆಪಿ ಮತದಾರರೂ 'ಕಟ್ಟಾ' ಬಿಜೆಪಿಗಳೇನಲ್ಲ. ಹಲವಾರು ಕಡೆ ಜನತಾ, ಸಿಪಿಐ ಮತ್ತು ಸಿಪಿಎಂ ಕಾರ್ಯಕರ್ತರು ಇವರುಗಳ ಜೊತೆ ಒಳ್ಳೆಯ ಬಾಂಧವ್ಯ ಹೊಂದಿದ್ದಾರೆ. ರೈತ ಸಂಘದಲ್ಲೂ ಹಲವರು ಸಕ್ರಿಯರಿದ್ದಾರೆ. ಇನ್ನು ಕೆಲವರಲ್ಲಿ 'ನಮಗೆ ಕಾಂಗ್ರೆ ಆದರೇನು, ಯಾರಾದರೇನು ?' ಎಂಬ ಭಾವನೆಯಿದೆ.

ಹೀಗಾಗಿ, ಬಿಜೆಪಿ ನಾಯಕತ್ವ ತಟಸ್ಥವಾಗಿದ್ದರೂ ಅವರ ಬೆಂಬಲದ ಮತಗಳು ಮೂರು ಅಭ್ಯರ್ಥಿಗಳಿಗೂ ಹಂಚಿಕೆಯಾಗಲಿವೆ; ಕಾಂಗ್ರೆಗೆ ಬಹುಶಃ ಸಣ್ಣ ಪಾಲು ಸಿಗಬಹುದು ಅಷ್ಟೆ.

ಇಷ್ಟಾದರೂ, ಸಾರ್ವತ್ರಿಕವಾಗಿ ಮತದಾರರ ನಿರಾಸಕ್ತಿ, ನಿರುತ್ಸಾಹಗಳೇ ಈ ಚುನಾವಣೆಯಲ್ಲಿ ಕೊನೆಯವರೆಗೂ ಉಳಿಯುವ ಪ್ರಧಾನ ಅಂಶ ಎಂಬುದು ನಿಸ್ಸಂದೇಹ.

ಹಿರಿಯ ಪತ್ರಕರ್ತನ ಕೊಲೆ ಖಂಡನೆ

ಚಿಕ್ಕಮಗಳೂರು :

ಖ್ಯಾತ ಪತ್ರಕರ್ತ, ಅಖಿಲ ಭಾರತೀಯ ಸಣ್ಣ ಮತ್ತು ಮಧ್ಯಮ ದರ್ಜೆ ಪತ್ರಿಕೆಗಳ ಸಂಘಟನೆಯ ಅಧ್ಯಕ್ಷ, ದೆಹಲಿಯ ಪ್ರೇಂ ಚಂದ್ ವರ್ಮ ಅವರ ಕಗ್ಗೊಲೆಗೆ ಜಿಲ್ಲಾ ಪತ್ರಕರ್ತರ ಸಂಘ ತೀವ್ರ ಶೋಕ ವ್ಯಕ್ತಪಡಿಸಿದೆ.

ಈ ಪ್ರಕರಣದ ಹಿಂದೆ ಅಡಗಿರುವ ದುಷ್ಟ ಶಕ್ತಿಗಳನ್ನು ಉನ್ನತ ತನಿಖೆ ಏರ್ಪಡಿಸುವ ಮೂಲಕ ಪತ್ತೆಹಚ್ಚಿ, ಉಗ್ರ ಕ್ರಮ ಕೈಗೊಳ್ಳಬೇಕೆಂದೂ, ಪತ್ರಕರ್ತರಿಗೆಲ್ಲ ಸೂಕ್ತ ರಕ್ಷಣೆ ಒದಗಿಸಬೇಕೆಂದೂ ಸಂಘದ ಅಧ್ಯಕ್ಷ ಹೆಚ್. ಕೆ. ನರಸಿಂಹೇಮೂರ್ತಿ, ಕಾರ್ಯದರ್ಶಿ ಗಿರೀಶ್ ಹಾವಿನಕಾಡು ಕೇಂದ್ರ ವಾರ್ತಾ ಖಾತೆ ಸಚಿವರನ್ನು ಮನವಿ ಮೂಲಕ ಒತ್ತಾಯಿಸಿದ್ದಾರೆ.

ಅನಿಲ ಸ್ಥಾವರ ನಿರ್ಮಾಣದ ತರಬೇತಿ ಶಿಬಿರ

ಕೊಪ್ಪ: ಗೋಬರ್ ಗ್ಯಾಸ್ ಮತ್ತು ಬಯೋಗ್ಯಾಸ್ ಘಟಕಗಳನ್ನು ಕಟ್ಟುವ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮವೊಂದನ್ನು ಇಲ್ಲಿನ ಕ್ಷೇತ್ರಾಭಿವೃದ್ಧಿ ಕಚೇರಿಯ ಆಶ್ರಯದಲ್ಲಿ ಯೋಜಿಸಲಾಗಿದೆ. ಹೀಗೆ ತರಬೇತಿ ಪಡೆದವರು ಬೇರೆಯವರ ಘಟಕಗಳನ್ನೂ ಕಟ್ಟಿ ಕೊಟ್ಟು ಆದಾಯ ಗಳಿಸಬಹುದು.

ಆಸಕ್ತರು ಕೂಡಲೇ ಇಲ್ಲಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಬಹುದು.

ಸಿ. ಪಿ. ಐ. ಗೆ ಯುವ ಜನತಾ ಬೆಂಬಲ

ಕೊಪ್ಪ: ಜನತಾ ಮತ್ತು ಮಿತ್ರ ಪಕ್ಷಗಳ ಸಹಕಾರದಿಂದ ಸ್ಪರ್ಧಿಸಿರುವ ಸಿಪಿಐ ಅಭ್ಯರ್ಥಿ ಸುಂದರೇಶ್ ಗೆ ಪೂರ್ಣ ಬೆಂಬಲ ಸೂಚಿಸಿ, ಅವರ ಗೆಲುವಿಗೆ ಪಣ ತೊಟ್ಟಿರುವ ಕೆಪಪ್ಪ ತಾ|| ಯುವ ಜನತಾ ಘಟಕವೂ, ಮತದಾರರು ಇವರ ಕುಡುಗೋಲು-ಭತ್ತದ ತೆನೆ ಗುರುತಿಗೆ ಮತ ನೀಡಿ ಜಯ ದೊರಕಿಸುವಂತೆ ಮನವಿ ಮಾಡಿದೆ.

ಕಾಮ್ರೇಡ್ ಬಿ. ಕೆ. ಸುಂದರೇಶ್



ಕೇವಲ 27 ವರ್ಷದ ತರುಣ ಬಿ. ಕೆ. ಸುಂದರೇಶ್ ತಮ್ಮ ವಿದ್ಯಾರ್ಥಿದೆಸೆಯಿಂದಲೂ ಸಂಘಟನೆ ಮತ್ತು ಅನ್ಯಾಯದ ವಿರುದ್ಧದ ಹೋರಾಟದಲ್ಲಿ ಬೆಳೆದು ಬಂದವರು. ವಿದ್ಯಾರ್ಥಿಗಳ, ಯುವಜನರ, ಕಾರ್ಮಿಕರ, ರೈತರ ಮುಂದಾಳುವಾಗಿ, ಜಿಲ್ಲೆಯಲ್ಲಿ ಕಾರ್ಮಿಕ ಚಳುವಳಿಗೆ ಹೊಸ ಜೀವ ತುಂಬಿದವರು. ಸಿ. ಪಿ. ಐ. ನ ಜಿಲ್ಲಾ ಕಾರ್ಯದರ್ಶಿ ಮತ್ತು ರಾಜ್ಯ ಮಂಡಲಿಯ ಸದಸ್ಯರಾಗಿರುವ ಬಿ. ಕೆ. ಸುಂದರೇಶ್ ರೈತರ ಮತ್ತು ಕಾರ್ಮಿಕರ ಹೋರಾಟಗಳಲ್ಲಿ ಬಂಧಿತರಾಗಿ ಸೆರೆವಾಸವನ್ನೂ ಅನುಭವಿಸಿದವರು.

1983 ರ ಆಗಸ್ಟ್ ನಿಂದ 84 ರ ಜೂನ್‌ವರೆಗೆ ಸಮಾಜವಾದಿ ಉನ್ನತ ಅಧ್ಯಯನಕ್ಕಾಗಿ ಸೋವಿಯತ್ ರಷ್ಯದಲ್ಲಿ ಪ್ರವಾಸಮಾಡಿದವರು.

ಸಿ. ಪಿ. ಐ. ಚುನಾವಣಾ ಪ್ರಚಾರ ಸಮಿತಿ

"ಜನತಾ ಸರ್ಕಾರ ಏನು ಮಾಡಿದೆ? ಏನು ಮಾಡಿದೆ .... ?"

1983 ರ ಜನವರಿ 10 ರಂದು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರದ ಸಾಧನೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ :

1 ರೈತ ಸಂಘದ 7 ಬೇಡಿಕೆಗಳಲ್ಲಿ 5 ಬೇಡಿಕೆಗಳಿಗೆ ಮನ್ನಣೆ ನೀಡಿರುವುದು
2 ಹಿಂದಿನ ಸರ್ಕಾರ ಬಂಧಿಸಿದ್ದ ಸುಮಾರು 3000 ರೈತರ ಬೇಷರತ್ ಬಿಡುಗಡೆ
3 ಸಕಾಲದಲ್ಲಿ ಸಹಕಾರ ಬ್ಯಾಂಕು ಮತ್ತು ಸಹಕಾರ ಸಂಘಗಳ ಸಾಲ ಮರುಪಾವತಿ ಮಾಡಿದ ರೈತರಿಗೆ ಬಡ್ಡಿ ವಿನಾಯ್ತಿ ಮತ್ತು ಶೇಕಡಾ 7ರ ಬಡ್ಡಿ ರಿಯಾಯಿತಿ (ಒಟ್ಟು 72 ಕೋಟಿ ರೂ. ಪರಿಹಾರ)
4 ರೈತರಿಗೆ ನೀರಾವರಿಗಾಗಿ ವಿಶೇಷ ಸಾಲದ ಮತ್ತು ವಿದ್ಯುತ್ ಸರಬರಾಜಿನ ಕ್ರಮ
5 ಸಣ್ಣ ರೈತರು ಒತ್ತುವರಿ ಮಾಡಿದ ಭೂಮಿ ಅವರಿಗೇ ಕಾಯಂ ಮಾಡುವುದು
6 ಧಾನ್ಯಗಳಿಗೆ ನ್ಯಾಯ ಬೆಲೆ ನೀಡಿ ಸರ್ಕಾರವೇ ಧಾನ್ಯ ಖರೀದಿಸುವುದು
7 ರೈತೋಪಯೋಗಿ ನೇಗಿಲು, ಗುದ್ದಲಿ ಮುಂತಾದ ಕೃಷಿ ಉಪಕರಣಗಳ ಮೇಲಿನ ಕರ ರಿಯಾಯಿತಿ
8 ಇತ್ತೀಚಿನ ಆಜ್ಞೆಯ ಪ್ರಕಾರ 10 ಸಾವಿರ ರೂ. ಒಳಗಿನ ರೈತ ಸಾಲಗಾರರಿಗೆ ಬಡ್ಡಿ ವಜಾ ಮಾಡುವುದು
9 ಗೇಣಿದಾರ ರೈತರಿಗೆ ಭೂಸುಧಾರಣೆಯಲ್ಲಿ ದೊರೆತ ಭೂಮಿಯ ಕಂತು ಮನ್ನಾ
10 ಗ್ರಾಮೀಣ ರಸ್ತೆ ದುರಸ್ತಿ, ಹೊಸ ಸಂಪರ್ಕಗಳ ನಿರ್ಮಾಣ, ಸೇತು ಬಂಧನ ಕಾರ್ಯಕ್ರಮ
11 ಕೃಷಿ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸಲು ಗ್ರಾಮ ಕೈಗಾರಿಕೆಗಳ ವಿಶೇಷ ಸಾಲದ ಸೌಲಭ್ಯ
12 ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿಶೇಷ ಸೌಲಭ್ಯಗಳ ಹೊಸ ಕಾರ್ಯಕ್ರಮ
13 ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ 22 ಸಾವಿರಕ್ಕೂ ಹೆಚ್ಚು ಕೊಳವೆ ಬಾವಿಗಳ ನಿರ್ಮಾಣ (ಭಾರತದಲ್ಲೇ ಪ್ರಥಮ ಸಾಧನೆ)
14 ವಿಧವೆಯರಿಗೆ 50 ರೂ. ಮಾಸಾಶನ, ಬಡ ಮಹಿಳೆಯರಿಗೆ ಹೆರಿಗೆ ಭತ್ಯ (3 ತಿಂಗಳು) ಹಾಗೂ ಅಂಗ ವಿಕಲರ ಮಾಸಾಶನ ಮತ್ತು ವೃದ್ಧಾಪ್ಯ ವೇತನ 40 ರೂ. ನಿಂದ 50 ರೂ. ಗೆ ಏರಿಕೆ
15 ಭೂ ಮಾಲೀಕ ವಿಧವೆಯರಿಗೆ ಏಕ ಗಂಟಿನಲ್ಲಿ ಪರಿಹಾರ ನೀಡಿಕೆಗೆ ಕ್ರಮ
16 ಆರೋಗ್ಯ ಇಲಾಖೆಗೆ ಹೊಸ ಆಯಾಮ; ಸಾವಿರಾರು ಆಸ್ಪತ್ರೆಗಳಿಗೆ ಹೊಸ ವೈದ್ಯರ ನೇಮಕ
17 ಹೋಬಳಿ ಮಟ್ಟದಲ್ಲಿ ಆರೋಗ್ಯ ಕೇಂದ್ರಗಳ ಸ್ಥಾಪನೆ, ದೊಡ್ಡ ಆಸ್ಪತ್ರೆಗಳ ಸುಧಾರಣೆಗೆ ವಿಶೇಷ ಆದ್ಯತೆ
18 ಅಧಿಕಾರ ಮತ್ತು ಸಂಪನ್ಮೂಲಗಳ ವಿಕೇಂದ್ರೀಕರಣದ ದಿಕ್ಕಿನಲ್ಲಿ ಜಿಲ್ಲಾ ಪರಿಷತ್– ಗ್ರಾಮ ಪಂಚಾಯಿತಿಗಳ ಮಸೂದೆ ಮಂಡಿಸಿ ಅಂಗೀಕರಿಸಿರುವುದು
19 ಆಹಾರ ಧಾನ್ಯ ಕಳ್ಳ ಸಾಗಾಣಿಕೆ ತಡೆಗೆ ಬಿಗಿ ಕ್ರಮ, ಆಹಾರಧಾನ್ಯ ಬೆ... ಹತೋಟಿಗೆ ಕ್ರಮ
20 ಭ್ರಷ್ಟಾಚಾರ ನಿರ್ಮೂಲನೆಗೆ ಕಠಿಣ ಕ್ರಮ
21 ಗ್ರಾಮೀಣ ಸಾರಿಗೆ ವ್ಯವಸ್ಥೆಗೆ ಆದ್ಯ ಗಮನ; 'ಗಂಗಾ ಕಲ್ಯಾಣ' ವಿಶೇಷ ಯೋಜನೆ
22 ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿ 58 ಕ್ಕೆ ಏರಿಕೆ
23 ಜನ ಸಂಪರ್ಕ ಸಭೆ ಕಾರ್ಯಕ್ರಮ–ಜನರಿದ್ದಲ್ಲಿಗೆ ಸರ್ಕಾರದ ಅಧಿಕಾರಿಗಳು ಹೋಗುವ ಯೋಜನೆ; ಇತ್ಯಾದಿ, ಇತ್ಯಾದಿ.

ಈ ವರೆಗೆ ಯಾವುದಾದರೂ ಸರ್ಕಾರ ಇಷ್ಟು ಕೆಲಸ ಮಾಡಿತ್ತೆ?

ಜನತಾ ಪಕ್ಷಕ್ಕೆ ಕೊಡುವ ಬೆಂಬಲ ಇಂಥ ಇನ್ನೂ ಹಲವು ಹನ್ನೊಂದು ಕಾರ್ಯಕ್ರಮಗಳಿಗೆ ಕೊಡುವ ಬೆಂಬಲ

ಇದೇ ಡಿಸೆಂಬರ್ 24 ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ

ನಮ್ಮ ಮಿತ್ರ ಪಕ್ಷವಾದ ಸಿ. ಪಿ. ಐ. ಪಕ್ಷದ ಅಭ್ಯರ್ಥಿ

ಬಿ. ಕೆ. ಸುಂದರೇಶ್

ಇವರನ್ನು ಬೆಂಬಲಿಸಿ ಅತ್ಯಧಿಕ ಬಹುಮತದಿಂದ ಚುನಾಯಿಸಿ.

ಇವರ ಗುರುತು

ಕುಡುಗೋಲು – ತೆನೆ

ಜನತಾ ಪಕ್ಷದ ಚುನಾವಣಾ ಸಮಿ...
ಚಿಕ್ಕಮಗಳೂರು ಲೋಕಸಭಾ ಕ್ಷೇ...
ಶೃಂಗೇರಿ ವಿಧಾನಸಭಾ ಕ್ಷೇತ್ರ ಘ...

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚು ಕೂಟ, ಕೊಪ್ಪ.

ನಿರಾಸಕ್ತಿಯೇ ಪ್ರಧಾನ ಅಂಶ

(1ನೇ ಪುಟದಿಂದ)

ಈ ಕ್ಷೇತ್ರದಲ್ಲಿ ನಿಜವಾದ ಸ್ಪರ್ಧೆಯಿರುವುದು ಈ ಮೂವರಲ್ಲೇ. ಉಳಿದಂತೆ ಚರಣ ಸಿಂಗ್ ಪಕ್ಷದ ಪಿ. ಎಂ. ಎಸ್. ಶಾಸ್ತ್ರಿ, 'ನಾವು ಕನ್ನಡಿಗರು' ಸಂಘಟನೆಯ ಎಂ. ಕೆ. ದಯಾನಂದ, ಪಕ್ಷೇತರರಾದ ಭೈರಪ್ಪ ಇವರುಗಳನ್ನು ಹೆಸರಿಸಬಹುದಾದರೂ ಇವರ ಸ್ಪರ್ಧೆ ಗಣನೀಯವಲ್ಲ. ಉಳಿದವರೆಲ್ಲ ಮುಖ್ಯ ಚುನಾವಣಾ ಕಮೀಶನರ್ ಆರ್. ಕೆ. ತ್ರಿವೇದಿ ಪಟ್ಟಿ ಮಾಡಿದಂಥವರು.

ಇನ್ನು, ಬಿಜೆಪಿಯ ಸಂದಿಗ್ಧದ ಕುರಿತು ಹೇಳುವುದಾದರೆ–ರಾಜ್ಯ ಮಟ್ಟದಲ್ಲಿ ಅದಕ್ಕೆ ಜನತಾ ಪಕ್ಷದ ಮೈತ್ರಿಯಿದೆ. ಆದರೆ ಸಿಪಿಐಯ ಉದ್ದೇಶ 'ಕಾಂಗ್ರೆ–ಬಿಜೆಪಿಗಳೆರಡನ್ನೂ ಸೋಲಿಸುವು'ದಾದ್ದರಿಂದ ಸಿಪಿಐ ಅಭ್ಯರ್ಥಿಗೆ ಮತ ನೀಡಲು ಬಾರದು. ರೈತ ಸಂಘದ ಶಿವಮೊಗ್ಗದ ಅಭ್ಯರ್ಥಿ ಸ್ಪರ್ಧೆಯಿಂದ ನಿವೃತ್ತರಾದರೆ ಇಲ್ಲಿ ಅವರ ಅಭ್ಯರ್ಥಿಗೆ ಬೆಂಬಲಿಸುವ ಬಿಜೆಪಿಯ ಶರತ್ತಿಗೆ ರೈತ ಸಂಘ ಒಪ್ಪುವ ಸೂಚನೆಯಿಲ್ಲ. ಹಾಗಾಗಿ ಬಿಜೆಪಿ ಬೆಂಬಲಿಗರು ನಾಯಕರ ಮಾರ್ಗದರ್ಶನ ಕೇಳಿದರೆ ಉತ್ತರಿಸಲು ಅವರಿಗೆ ಸಂದಿಗ್ಧ. 'ಮತದಾನ ಮಾಡದಿದ್ದರೂ ಅಭ್ಯಂತರವಿಲ್ಲ' ಎಂಬುದು ಅವರ ಮಾರ್ಗದರ್ಶನ.

ಆದರೂ ಎಲ್ಲಾ ಬಿಜೆಪಿ ಮತದಾರರೂ 'ಕಟ್ಟಾ' ಬಿಜೆಪಿಗಳೇನಲ್ಲ. ಹಲವಾರು ಕಡೆ ಜನತಾ, ಸಿಪಿಐ ಮತ್ತು ಸಿಪಿಎಂ ಕಾರ್ಯಕರ್ತರು ಇವರುಗಳ ಜೊತೆ ಒಳ್ಳೆಯ ಬಾಂಧವ್ಯ ಹೊಂದಿದ್ದಾರೆ. ರೈತ ಸಂಘದಲ್ಲೂ ಹಲವರು ಸಕ್ರಿಯರಿದ್ದಾರೆ. ಇನ್ನು ಕೆಲವರಲ್ಲಿ 'ನಮಗೆ ಕಾಂಗ್ರೆ ಆದರೇನು, ಯಾರಾದರೇನು ?' ಎಂಬ ಭಾವನೆಯಿದೆ.

ಹೀಗಾಗಿ, ಬಿಜೆಪಿ ನಾಯಕತ್ವ ತಟಸ್ಥವಾಗಿದ್ದರೂ ಅವರ ಬೆಂಬಲದ ಮತಗಳು ಮೂರೂ ಅಭ್ಯರ್ಥಿಗಳಿಗೂ ಹಂಚಿಕೆಯಾಗಲಿವೆ; ಕಾಂಗ್ರೆಗೆ ಬಹುಶಃ ಸಣ್ಣ ಪಾಲು ಸಿಗಬಹುದು ಅಷ್ಟೆ.

ಇಷ್ಟಾದರೂ, ಸಾರ್ವತ್ರಿಕವಾಗಿ ಮತದಾರರ ನಿರಾಸಕ್ತಿ, ನಿರುತ್ಸಾಹಗಳೇ ಈ ಚುನಾವಣೆಯಲ್ಲಿ ಕೊನೆಯವರೆಗೂ ಉಳಿಯುವ ಪ್ರಧಾನ ಅಂಶ ಎಂಬುದು ನಿಸ್ಸಂದೇಹ.

ಹಿರಿಯ ಪತ್ರಕರ್ತನ ಕೊಲೆ ಖಂಡನೆ

ಚಿಕ್ಕಮಗಳೂರು : ಖ್ಯಾತ ಪತ್ರಕರ್ತ, ಅಖಿಲ ಭಾರತೀಯ ಸಣ್ಣ ಮತ್ತು ಮಧ್ಯಮ ದರ್ಜೆ ಪತ್ರಿಕೆಗಳ ಸಂಘಟನೆಯ ಅಧ್ಯಕ್ಷ, ದೆಹಲಿಯ ಪ್ರೇಂ ಚಂದ್ ವರ್ಮ ಅವರ ಕಗ್ಗೊಲೆಗೆ ಜಿಲ್ಲಾ ಪತ್ರಕರ್ತರ ಸಂಘ ತೀವ್ರ ಶೋಕ ವ್ಯಕ್ತಪಡಿಸಿದೆ.

ಈ ಪ್ರಕರಣದ ಹಿಂದೆ ಅಡಗಿರುವ ದುಷ್ಟ ಶಕ್ತಿಗಳನ್ನು ಉನ್ನತ ತನಿಖೆ ಏರ್ಪಡಿಸುವ ಮೂಲಕ ಪತ್ತೆಹಚ್ಚಿ, ಉಗ್ರ ಕ್ರಮ ಕೈಗೊಳ್ಳಬೇಕೆಂದೂ, ಪತ್ರಕರ್ತರಿಗೆಲ್ಲ ಸೂಕ್ತ ರಕ್ಷಣೆ ಒದಗಿಸಬೇಕೆಂದೂ ಸಂಘದ ಅಧ್ಯಕ್ಷ ಹೆಚ್. ಕೆ. ನರಸಿಂಹಮೂರ್ತಿ, ಕಾರ್ಯದರ್ಶಿ ಗಿರೀಶ್ ಮಾವಿನಕಾಡು ಕೇಂದ್ರ ವಾರ್ತಾ ಖಾತೆ ಸಚಿವರನ್ನು ಮನವಿ ಮೂಲಕ ಒತ್ತಾಯಿಸಿದ್ದಾರೆ.

ಅನಿಲ ಸ್ಥಾವರ ನಿರ್ಮಾಣದ ತರಬೇತಿ ಶಿಬಿರ


ಕೊಪ್ಪ: ಗೋಬರ್ ಗ್ಯಾಸ್ ಮತ್ತು ಬಯೋಗ್ಯಾಸ್ ಘಟಕಗಳನ್ನು ಕಟ್ಟುವ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮವೊಂದನ್ನು ಇಲ್ಲಿನ ಕ್ಷೇತ್ರಾಭಿವೃದ್ಧಿ ಕಚೇರಿಯ ಆಶ್ರಯದಲ್ಲಿ ಯೋಜಿಸಲಾಗಿದೆ. ಹೀಗೆ ತರಬೇತಿ ಪಡೆದವರು ಬೇರೆಯವರ ಘಟಕಗಳನ್ನೂ ಕಟ್ಟಿ ಕೊಟ್ಟು ಆದಾಯ ಗಳಿಸಬಹುದು.

ಆಸಕ್ತರು ಕೂಡಲೇ ಇಲ್ಲಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಬಹುದು.

ಸಿ. ಪಿ. ಐ. ಗೆ ಯುವ ಜನತಾ ಬೆಂಬಲ

ಕೊಪ್ಪ: ಜನತಾ ಮತ್ತು ಮಿತ್ರ ಪಕ್ಷಗಳ ಸಹಕಾರದಿಂದ ಸ್ಪರ್ಧಿಸಿರುವ ಸಿಪಿಐ ಅಭ್ಯರ್ಥಿ ಸುಂದರೇಶ್ ಗೆ ಪೂರ್ಣ ಬೆಂಬಲ ಸೂಚಿಸಿ, ಅವರ ಗೆಲುವಿಗೆ ಪಣ ತೊಟ್ಟಿರುವ ಕೆವಪ್ಪ ತಾ|| ಯುವ ಜನತಾ ಘಟಕವೂ, ಮತದಾರರು ಇವರ ಕುಡುಗೋಲು-ಭತ್ತದ ತೆನೆ ಗುರುತಿಗೆ ಮತ ನೀಡಿ ಜಯ ದೊರಕಿಸುವಂತೆ ಮನವಿ ಮಾಡಿದೆ.

ಕಾಮ್ರೇಡ್ ಬಿ. ಕೆ. ಸುಂದರೇಶ್



ಕೇವಲ 27 ವರ್ಷದ ತರುಣ ಬಿ. ಕೆ. ಸುಂದರೇಶ್ ತಮ್ಮ ವಿದ್ಯಾರ್ಥಿದೆಸೆಯಿಂದಲೂ ಸಂಘಟನೆ ಮತ್ತು ಅನ್ಯಾಯದ ವಿರುದ್ಧದ ಹೋರಾಟದಲ್ಲಿ ಬೆಳೆದು ಬಂದವರು. ವಿದ್ಯಾರ್ಥಿಗಳ, ಯುವಜನರ, ಕಾರ್ಮಿಕರ, ರೈತರ ಮುಂದಾಳಾಗಿ, ಜಿಲ್ಲೆಯಲ್ಲಿ ಕಾರ್ಮಿಕ ಚಳುವಳಿಗೆ ಹೊಸ ಜೀವ ತುಂಬಿದವರು. ಸಿ. ಪಿ. ಐ. ನ ಜಿಲ್ಲಾ ಕಾರ್ಯದರ್ಶಿ ಮತ್ತು ರಾಜ್ಯ ಮಂಡಲಿಯ ಸದಸ್ಯರಾಗಿರುವ ಬಿ. ಕೆ. ಸುಂದರೇಶ್ ರೈತರ ಮತ್ತು ಕಾರ್ಮಿಕರ ಹೋರಾಟಗಳಲ್ಲಿ ಬಂಧಿತರಾಗಿ ಸೆರೆವಾಸವನ್ನೂ ಅನುಭವಿಸಿದವರು.

1983 ರ ಆಗಸ್ಟ್ ನಿಂದ 84 ರ ಜೂನ್ ವರೆಗೆ ಸಮಾಜವಾದಿ ಉನ್ನತ ಅಧ್ಯಯನಕ್ಕಾಗಿ ಸೋವಿಯತ್ ರಷ್ಯದಲ್ಲಿ ಪ್ರವಾಸಮಾಡಿದವರು.

ಸಿ. ಪಿ. ಐ. ಚುನಾವಣಾ ಪ್ರಚಾರ ಸಮಿತಿ

"ಜನತಾ ಸರ್ಕಾರ ಏನು ಮಾಡಿದೆ? ಏನು ಮಾಡಿದೆ .... ?"

1983 ರ ಜನವರಿ 10 ರಂದು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರದ ಸಾಧನೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ :

1 ರೈತ ಸಂಘದ 7 ಬೇಡಿಕೆಗಳಲ್ಲಿ 5 ಬೇಡಿಕೆಗಳಿಗೆ ಮನ್ನಣೆ ನೀಡಿರುವುದು
2 ಹಿಂದಿನ ಸರ್ಕಾರ ಬಂಧಿಸಿದ್ದ ಸುಮಾರು 3000 ರೈತರ ಬೇಷರತ್ ಬಿಡುಗಡೆ
3 ಸಕಾಲದಲ್ಲಿ ಸಹಕಾರ ಬ್ಯಾಂಕು ಮತ್ತು ಸಹಕಾರ ಸಂಘಗಳ ಸಾಲ ಮರುಪಾವತಿ ಮಾಡಿದ ರೈತರಿಗೆ ಬಡ್ಡಿ ವಿನಾಯ್ತಿ ಮತ್ತು ಶೇಕಡಾ 7ರ ಬಡ್ಡಿ ರಿಯಾಯಿತಿ (ಒಟ್ಟು 72 ಕೋಟಿ ರೂ. ಪರಿಹಾರ)
4 ರೈತರಿಗೆ ನೀರಾವರಿಗಾಗಿ ವಿಶೇಷ ಸಾಲದ ಮತ್ತು ವಿದ್ಯುತ್ ಸರಬರಾಜಿನ ಕ್ರಮ
5 ಸಣ್ಣ ರೈತರು ಒತ್ತುವರಿ ಮಾಡಿದ ಭೂಮಿ ಅವರಿಗೇ ಕಾಯಂ ಮಾಡುವುದು
6 ಧಾನ್ಯಗಳಿಗೆ ನ್ಯಾಯ ಬೆಲೆ ನೀಡಿ ಸರ್ಕಾರವೇ ಧಾನ್ಯ ಖರೀದಿಸುವುದು
7 ರೈತೋಪಯೋಗಿ ನೇಗಿಲು, ಗುದ್ದಲಿ ಮುಂತಾದ ಕೃಷಿ ಉಪಕರಣಗಳ ಮೇಲಿನ ಕರ ರಿಯಾಯಿತಿ
8 ಇತ್ತೀಚಿನ ಆಜ್ಞೆಯ ಪ್ರಕಾರ 10 ಸಾವಿರ ರೂ. ಒಳಗಿನ ರೈತ ಸಾಲಗಾರರಿಗೆ ಬಡ್ಡಿ ವಜಾ ಮಾಡುವುದು
9 ಗೇಣಿದಾರ ರೈತರಿಗೆ ಭೂಸುಧಾರಣೆಯಲ್ಲಿ ದೊರೆತ ಭೂಮಿಯ ಕಂತು ಮನ್ನಾ
10 ಗ್ರಾಮೀಣ ರಸ್ತೆ ದುರಸ್ತಿ, ಹೊಸ ಸಂಪರ್ಕಗಳ ನಿರ್ಮಾಣ, ಸೇತು ಬಂಧನ ಕಾರ್ಯಕ್ರಮ
11 ಕೃಷಿ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸಲು ಗ್ರಾಮ ಕೈಗಾರಿಕೆಗಳ ವಿಶೇಷ ಸಾಲದ ಸೌಲಭ್ಯ
12 ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿಶೇಷ ಸೌಲಭ್ಯಗಳ ಹೊಸ ಕಾರ್ಯಕ್ರಮ
13 ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ 22 ಸಾವಿರಕ್ಕೂ ಹೆಚ್ಚು ಕೊಳವೆ ಬಾವಿಗಳ ನಿರ್ಮಾಣ (ಭಾರತದಲ್ಲೇ ಪ್ರಥಮ ಸಾಧನೆ)
14 ವಿಧವೆಯರಿಗೆ 50 ರೂ. ಮಾಸಾಶನ, ಬಡ ಮಹಿಳೆಯರಿಗೆ ಹೆರಿಗೆ ಭತ್ಯ (3 ತಿಂಗಳು) ಹಾಗೂ ಅಂಗ ವಿಕಲರ ಮಾಸಾಶನ ಮತ್ತು ವೃದ್ಧಾಪ್ಯ ವೇತನ 40 ರೂ. ನಿಂದ 50 ರೂ. ಗೆ ಏರಿಕೆ
15 ಭೂ ಮಾಲೀಕ ವಿಧವೆಯರಿಗೆ ಏಕ ಗಂಟಿನಲ್ಲಿ ಪರಿಹಾರ ನೀಡಿಕೆಗೆ ಕ್ರಮ
16 ಆರೋಗ್ಯ ಇಲಾಖೆಗೆ ಹೊಸ ಆಯಾಮ; ಸಾವಿರಾರು ಆಸ್ಪತ್ರೆಗಳಿಗೆ ಹೊಸ ವೈದ್ಯರ ನೇಮಕ
17 ಹೋಬಳಿ ಮಟ್ಟದಲ್ಲಿ ಆರೋಗ್ಯ ಕೇಂದ್ರಗಳ ಸ್ಥಾಪನೆ, ದೊಡ್ಡ ಆಸ್ಪತ್ರೆಗಳ ಸುಧಾರಣೆಗೆ ವಿಶೇಷ ಆದ್ಯತೆ
18 ಅಧಿಕಾರ ಮತ್ತು ಸಂಪನ್ಮೂಲಗಳ ವಿಕೇಂದ್ರೀಕರಣದ ದಿಕ್ಕಿನಲ್ಲಿ ಜಿಲ್ಲಾ ಪರಿಷತ್– ಗ್ರಾಮ ಪಂಚಾಯಿತಿಗಳ ಮಸೂದೆ ಮಂಡಿಸಿ ಅಂಗೀಕರಿಸಿರುವುದು
19 ಆಹಾರ ಧಾನ್ಯ ಕಳ್ಳ ಸಾಗಾಣಿಕೆ ತಡೆಗೆ ಬಿಗಿ ಕ್ರಮ, ಆಹಾರಧಾನ್ಯ ಬೆಲೆ ಹತೋಟಿಗೆ ಕ್ರಮ
20 ಭ್ರಷ್ಟಾಚಾರ ನಿರ್ಮೂಲನೆಗೆ ಕಠಿಣ ಕ್ರಮ
21 ಗ್ರಾಮೀಣ ಸಾರಿಗೆ ವ್ಯವಸ್ಥೆಗೆ ಆದ್ಯ ಗಮನ; 'ಗಂಗಾ ಕಲ್ಯಾಣ' ವಿಶೇಷ ಯೋಜನೆ
22 ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿ 58 ಕ್ಕೆ ಏರಿಕೆ
23 ಜನ ಸಂಪರ್ಕ ಸಭೆ ಕಾರ್ಯಕ್ರಮ–ಜನರಿದ್ದಲ್ಲಿಗೆ ಸರ್ಕಾರದ ಅಧಿಕಾರಿಗಳು ಹೋಗುವ ಯೋಜನೆ; ಇತ್ಯಾದಿ, ಇತ್ಯಾದಿ.

ಈ ವರೆಗೆ ಯಾವುದಾದರೂ ಸರ್ಕಾರ ಇಷ್ಟು ಕೆಲಸ ಮಾಡಿತ್ತೆ?

ಜನತಾ ಪಕ್ಷಕ್ಕೆ ಕೊಡುವ ಬೆಂಬಲ ಇಂಥ ಇನ್ನೂ ಹಲವು ಹನ್ನೊಂದು ಕಾರ್ಯಕ್ರಮಗಳಿಗೆ ಕೊಡುವ ಬೆಂಬಲ


ಇದೇ ಡಿಸೆಂಬರ್ 24 ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ

ನಮ್ಮ ಮಿತ್ರ ಪಕ್ಷವಾದ ಸಿ. ಪಿ. ಐ. ಪಕ್ಷದ ಅಭ್ಯರ್ಥಿ

ಬಿ. ಕೆ. ಸುಂದರೇಶ್

ಇವರನ್ನು ಬೆಂಬಲಿಸಿ ಅತ್ಯಧಿಕ ಬಹುಮತದಿಂದ ಚುನಾಯಿಸಿ.

ಇವರ ಗುರುತು



ಕುಡುಗೋಲು – ತೆನೆ

ಜನತಾ ಪಕ್ಷದ ಚುನಾವಣಾ ಸಮಿತಿ
ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ
ಶೃಂಗೇರಿ ವಿಧಾನಸಭಾ ಕ್ಷೇತ್ರ ಘಟಕ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀಪಟಿಗೆ ಅಚ್ಚು ಕೂಟ, ಕೊಪ್ಪ.